ನಿಮ್ಮಲ್ಲಿ ಯಾವುದೇ ಪ್ರಶ್ನೆಗಳು/ ಸಲಹೆಗಳಿದ್ದಲ್ಲಿ ಅಥವಾ ಯಾವುದೇ ಸಹಕಾರ ಬೇಕಿದ್ದಲ್ಲಿ ನಮ್ಮನ್ನು ಸಂಪರ್ಕಿಸಿ.

**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**

ಮಾನಸಗಂಗೋತ್ರಿ, ಮೈಸೂರು 570 006

**ದೂರವಾಣಿ** : 0821 2514449 / 2514618

**ಫ್ಯಾಕ್ಸ್** : 0821 2510515

**ಇ-ಮೇಲ್** : director@aiishmysore.in

**ಕೆಲಸದ ವೇಳೆ** : ಬೆಳಗ್ಗೆ 9-00 ರಿಂದ ಸಂಜೆ 5-30 ರವರೆಗೆ

ಸೋಮವಾರದಿಂದ - ಶುಕ್ರವಾರದವರೆಗೆ

(ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)



# ಕಿವಿಯ ಹಿಂಭಾಗದಲ್ಲಿ ಧರಿಸುವ ಶ್ರವಣೋಪಕರಣದ ಸರಳ ತೊಂದರೆಗಳ ಪರಿಹಾರ

**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**

ಮಾನಸಗಂಗೋತ್ರಿ, ಮೈಸೂರು - 570 006

## ಕಿವಿಯ ಹಿಂಭಾಗದಲ್ಲಿ ಧರಿಸುವ ಶ್ರವಣೋಪಕರಣದ ಸರಳ ತೊಂದರೆಗಳ ಪರಿಹಾರ

ನೀವು ನಿಮ್ಮ ದಿನನಿತ್ಯ ಬಳಕೆಯ ಶ್ರವಣೋಪಕರಣದಲ್ಲಿ ಕೆಲವು ಸಾಮಾನ್ಯ ತೊಂದರೆಗಳನ್ನು ಎದುರಿಸಬಹುದು. ಅವುಗಳೆಂದರೆ, ಶ್ರವಣ ಉಪಕರಣದಿಂದ ಕಡಮೆ ಅಥವಾ ಶಬ್ದ ಬರದೇ ಇರುವುದು, ತೊಂದರೆಯಾಗುವಂತಹ ಶಬ್ದ ಬರುವುದು, ಶಬ್ದದ ಸ್ಪಷ್ಟತೆ ಇಲ್ಲದೇ ಇರುವುದು ಇತ್ಯಾದಿಗಳು. ಇಂತಹ ಕೆಲವು ತೊಂದರೆಗಳನ್ನು ಶ್ರವಣ ಉಪಕರಣವನ್ನು ಬಳಸುವವರೇ ಸರಿಪಡಿಸಿಕೊಳ್ಳಬಹುದು.

ಈ ಕೈಪಿಡಿಯು ಕಿವಿಯ ಹಿಂದೆ ಧರಿಸಿಕೊಳ್ಳುವ ಶ್ರವಣೋಪಕರಣದ (ಬಿಟಿಇ) ಕೆಲವು ಸಾಮಾನ್ಯ ತೊಂದರೆಗಳು, ಅದರ ಕಾರಣಗಳು ಮತ್ತು ಅವುಗಳನ್ನು ಸ್ವಲ್ಪ ಮಟ್ಟಿಗೆ ಬಗೆಹರಿಸುವ ವಿಧಾನಗಳನ್ನು ವಿವರಿಸಿದೆ.

| ತೊಂದರೆಗಳು | ಕಾರಣಗಳು | ಪರಿಹಾರಗಳು |
|---|---|---|
| ಶಬ್ದ ಬರದೇ ಇರುವುದು | ಶ್ರವಣೋಪಕರಣವು 'ಟಿ' ಅಥವಾ 'ಒ' (T or O) ಸ್ಥಿತಿಯಲ್ಲಿಡುವುದು. | M ಸ್ಥಿತಿಗೆ ಬದಲಾಯಿಸಿ |
| | ಕಡಿಮೆ ಬ್ಯಾಟರಿ | ಹೊಸ ಬ್ಯಾಟರಿಗೆ ಬದಲಾಯಿಸಿ |
| | ಬ್ಯಾಟರಿಯ ತಪ್ಪುಜೋಡಣೆ | ಬ್ಯಾಟರಿಯ "ಪಾಜಿಟಿವ್ (+ve)" ಹಾಗೂ "ನೆಗಿಟಿವ್ (–ve)" ತುದಿಗಳನ್ನು ಬದಲಿಸಿ. |
| | ಬ್ಯಾಟರಿ ಸೋರುವಿಕೆ | ಬ್ಯಾಟರಿಯನ್ನು ಬದಲಾಯಿಸಿ |
| | ಮುರಿದ ಬ್ಯಾಟರಿ ಸಂಪರ್ಕ | ರಿಪೇರಿಗೆ ಕಳುಹಿಸಿ |
| | ಶ್ರವಣೋಪಕರಣ ಮತ್ತು ಅದರ ಅಚ್ಚನ್ನು ಜೋಡಣೆ ಮಾಡುವ ಕೊಳವೆಯು ಚಪ್ಪಟೆಯಾಗಿರುವುದು ಅಥವಾ ಡೊಂಕಾಗಿರುವುದು | ಕೊಳವೆಯನ್ನು ಬದಲಾಯಿಸಿ |
| | ಗುಗ್ಗೆ ಅಥವಾ ಕೊಳೆಯಿಂದ ಕಿವಿಯ ಅಚ್ಚು ಮುಚ್ಚಿಕೊಂಡಿದ್ದರೆ | ಬೆಚ್ಚಗಿನ ನೀರು ಹಾಗೂ ಸೋಪು ಅಥವಾ ಶಾಂಪುವಿನಿಂದ ಸ್ವಚ್ಚಗೊಳಿಸಿ |
| | ಸ್ವಿಚ್‌ಗಳು ಮುರಿದಿದ್ದಲ್ಲಿ | ರಿಪೇರಿಗೆ ಕಳುಹಿಸಿ |
| ಬಿಟ್ಟು ಬಿಟ್ಟು ಬರುವ ಶಬ್ದ | ಸ್ವಿಚ್‌ಗಳಲ್ಲಿ ತೊಂದರೆಯಿದ್ದರೆ | ರಿಪೇರಿಗೆ ಕಳುಹಿಸಿ |
| | ಬ್ಯಾಟರಿಯ ಸಂಪರ್ಕದಲ್ಲಿ ತೊಂದರೆ ಇದ್ದರೆ | ಬ್ಯಾಟರಿಯ ಗಾತ್ರವನ್ನು ಪರಿಶೀಲಿಸಿ ಬ್ಯಾಟರಿಯ ಗಾತ್ರ ಸರಿಯಾಗಿದ್ದು, ಸಂಪರ್ಕದಲ್ಲಿ ಸಡಿಲತೆಯಿದ್ದರೆ ರಿಪೇರಿಗೆ ಕಳುಹಿಸಿ. |
| ಮೆದುವಾದ ಶಬ್ದ | ಕಡಿಮೆ ಬ್ಯಾಟರಿ | ಬ್ಯಾಟರಿ ಬದಲಾಯಿಸಿ |
| | ಕಿವಿ ಅಚ್ಚು ಸ್ವಲ್ಪ ಮುಚ್ಚಕೊಂಡಿದ್ದರೆ | ಕಿವಿ ಅಚ್ಚನ್ನು ತೊಳೆದು ಸ್ವಚ್ಛಗೊಳಿಸಿ. |
| | ಶಬ್ದದ ಮಟ್ಟ ಕಡಿಮೆಯಾಗಿದ್ದರೆ | ಸೂಚಿಸಿದ ಶಬ್ದ ಮಟ್ಟಕ್ಕೆ ಅಳವಡಿಸಿ |
| | ಮುರಿದ ಸ್ವಿಚ್‌ಗಳ ಅಥವಾ ಎಲೆಕ್ಟ್ರಾನಿಕ್ ದೋಷವಿದ್ದರೆ | ರಿಪೇರಿಗೆ ಕಳುಹಿಸಿ |
| ಶ್ರವಣೋಪಕರಣ–ದಿಂದ ಶಬ್ದ ಹೊರಬರುತ್ತಿದ್ದರೆ | ಶಬ್ದ ಮಟ್ಟವು ತುಂಬಾ ಹೆಚ್ಚಾಗಿರುತ್ತದೆ | ಹೇಳಿದ ಶಬ್ದದ ಮಟ್ಟಕ್ಕೆ ಅಳವಡಿಸಿ |
| | ಕೊಳವೆಯಲ್ಲಿ ರಂಧ್ರವಾಗಿದ್ದರೆ | ಕೊಳವೆಯನ್ನು ಬದಲಾಯಿಸಿ |
| | ಕಿವಿ ಅಚ್ಚು ಸರಿಯಾಗಿ ಕೂರುತ್ತಿಲ್ಲ | ಕಿವಿ ಅಚ್ಚನ್ನು ಬದಲಾಯಿಸಿ |
| | ಕಿವಿ ಅಚ್ಚನ್ನು ಸರಿಯಾಗಿ ಹಾಕದಿದ್ದರೆ | ಕಿವಿಯ ನಾಳದಲ್ಲಿ ಕಿವಿ ಅಚ್ಚನ್ನು ಸರಿಯಾಗಿ ಕೂರಿಸಿ |
| ವಿರೂಪಗೊಂಡ ಶಬ್ದ | ಧೂಳಾದ ಮೈಕ್ | ಮೆತ್ತಗಿರುವ ಒಣಗಿದ ಬಟ್ಟೆಯಿಂದ ಮೈಕ್‌ನ್ನು ಎಚ್ಚರಿಕೆಯಿಂದ ಒರೆಸಿ ಸ್ವಚ್ಛಗೊಳಿಸಿ |
| | ಸಡಿಲವಾದ/ಮುರಿದ ಸ್ವಿಚ್‌ಗಳು | ರಿಪೇರಿಗೆ ಕಳುಹಿಸಿ |
| | ಕಡಿಮೆ ಬ್ಯಾಟರಿ | ಬ್ಯಾಟರಿ ಬದಲಾಯಿಸಿ |
| | ಶ್ರವಣೋಪಕರಣ ಅಲುಗಾಡಿಸಿದಾಗ ಅತಿ ಹೆಚ್ಚಿನ ಶಬ್ದ ಬರುವುದು | ರಿಪೇರಿಗೆ ಕಳುಹಿಸಿ |
| ಶ್ರವಣೋಪಕರಣ–ದಿಂದ ಕಿವಿಯಲ್ಲಿ ಕಿರಿಕಿರಿಯಾಗುವುದು | ಕೊಳವೆಯ ಉದ್ದ ಚಿಕ್ಕದಿದ್ದರೆ | ಕೊಳವೆಯನ್ನು ಬದಲಾಯಿಸಿ |
| | ಗಡುಸಾಗಿ ಮಾಡಿದ ಕಿವಿ ಅಚ್ಚು | ಕಿವಿಯ ಅಚ್ಚು ತಂತ್ರಜ್ಞರನ್ನು ಸಂಪರ್ಕಿಸಿ, ಕಿವಿ ಅಚ್ಚನ್ನು ಬದಲಾಯಿಸಿಕೊಳ್ಳಿ ಅಥವಾ ಪಾಲಿಶ್ ಮಾಡಿಸಿಕೊಳ್ಳಿ |
| ಶ್ರವಣೋಪಕರಣವು ದೂರವಾಣಿಯ ಜೊತೆ ಕೆಲಸ ಮಾಡುತ್ತಿಲ್ಲವೆಂದರೆ | ಶ್ರವಣೋಪಕರಣದ ಸ್ವಿಚ್ 'T' ಸ್ಥಳದಲ್ಲಿ ಇಲ್ಲದಿರುವುದು | ಸ್ವಿಚ್‌ನ್ನು 'T'ಗೆ ಅಳವಡಿಸಿ |
| | ಶ್ರವಣಣೋಪಕರಣದಲ್ಲಿ 'T' ಇಲ್ಲದೆ ಇರುವುದು | ದೂರವಾಣಿಯನ್ನು ಶ್ರವಣೋಪಕರಣದ ಮೇಲೆ ಇಡಬೇಕು. ಆದರೆ ಅವುಗಳು ಒಂದನ್ನೊಂದು ತಾಗಬಾರದು. |
| | ಶಬ್ದ ಮಟ್ಟವು ಕಡಿಮೆ ಮಟ್ಟದಲ್ಲಿರುವುದು | ಶಬ್ದವನ್ನು ಹೆಚ್ಚಿಸಿ. |

ಮೇಲಿನ ಯಾವುದೇ ಕ್ರಮವು ಫಲಕಾರಿಯಾಗದೆ ಇದ್ದಲ್ಲಿ, ಹೆಚ್ಚಿನ ವ್ಯವಸ್ಥೆಗೆ ಶ್ರವಣ ತಜ್ಞರನ್ನು (ಆಡಿಯೋಲಜಿಸ್ಟ್‌ನ್ನು) ಸಂಪರ್ಕಿಸಿ.

**ಕಿವಿ ಅಚ್ಚನ್ನು ಸರಿಯಾಗಿ ಕೂರಿಸಲು**



ಕಿವಿ ಅಚ್ಚಿನ ತುದಿಯನ್ನು ಕಿವಿಯ ನಾಳಕ್ಕೆ ಹಾಕಿ



ಕಿವಿಯಾಲೆಯನ್ನು ಮೇಲೆ ಮತ್ತು ಹಿಂದೆ ಎಳೆಯಿರಿ



ಇಲ್ಲಿ ತೋರಿಸಿರುವ ಹಾಗೆ ಭದ್ರವಾಗಿ ಕೂರಿಸಲು ನಿಧಾನವಾಗಿ ಕಿವಿ ಅಚ್ಚನ್ನು ಒಳಗೆ ತಿರುಗಿಸಿ